# ನೆರೆ ಬಂದು ಪೀಡಿತ ಜನರೀಗ

## ಈಗ ಪರಿಹಾರ ಇಲ್ಲದೆ ಸರ್ಕಾರದಿಂದ ಪೀಡಿತ

ಕುಸಿದು ಬಿದ್ದ ಮನೆಗಳ ಅವಶೇಷಗಳಡಿ ಏನಾಧರೂ ಉಳಿದು ಅದು ದಕ್ಕಬಹುದೆನ್ನುವ ಭರವಸೆ ಯಾರಿಗೂ ಬರ್ತಾ ಇಲ್ಲ. ಕೊಚ್ಚಿಕೊಂಡು ಹೋದದ್ದು ಹೇಗೂ ಸಿಗೋದಿಲ್ಲ. ಹಲವಾರು ಜನರಿಗೆ ಉಟ್ಟ ಬಟ್ಟೆ ಬಿಟ್ಟರೆ ಬೇರೇನೂ ಉಳಿದಿಲ್ಲ. ಬೆಳೆದ ಬೆಳೆ, ಕಟ್ಟಿದ ಮನೆ, ಗಳಿಸಿದ ವಸ್ತುಗಳು ಏನಾದವೆಂದು ನೋಡೋದು ಇರಲಿ ತಮ್ಮ ಪ್ರಾಣಗಳನ್ನು ಉಳಿಸಿಕೊಂಡಿರೋದೇ ಲಕ್ಷಾಂತರ ಜನರಿಗೆ ಹೆಚ್ಚಿನ ವಿಚಾರವಾಗಿದೆ. ತಮ್ಮ ಆಪ್ತರನ್ನೂ ಕಳೆದುಕೊಂಡು, ಮನೆಮಠಗಳನ್ನೂ ಕಳೆದುಕೊಂಡವರ ನೋವು, ಆತಂಕ ಬೇಗುದಿಗಳು ವಿವರಿಸಲು ಬರಲಾರದ್ದು. ಲಕ್ಷಾಂತರ ಜನರಿಗೆ ತಮ್ಮ ಬದುಕು ಕನಿಷ್ಟ ಮೊದಲಿನ ಸ್ಥಿತಿಗಾದರೂ ಸುಧಾರಿಸಲು ಸರ್ಕಾರ ಬೆಂಬಲಿಸಬಹುದೆನ್ನುವ ಭರವಸೆ ಕಾಣ್ತಾ ಇಲ್ಲ. ಬದುಕಿ ಉಳಿಯಲು ದೇವಳವೋ, ಶಾಲೆಗಳೋ ಎತ್ತರದ ಪ್ರದೇಶ ಹೀಗೆ ಎಲ್ಲೆಂದರಲ್ಲಿ ಜನರು ಸೇರಿಕೊಂಡಿದ್ದಾರೆ. ಹಲವಾರು ಜನರು ಇದ್ದಬದ್ದದರೊಂದಿಗೆ ನೆಂಟರಿಷ್ಟರಿರುವ ಕಡೆಗೋ, ಇಲ್ಲಾ ಏನಾದರೂ ಕೆಲಸ ಮಾಡಿಕೊಂಡು ಬದುಕಲು ಗುಳೇ ಹೋಗುತ್ತಿದ್ದಾರೆ. ಸರ್ಕಾರ ಆರಂಭಿಸಿದ ಗಂಜಿ ಕೇಂದ್ರಗಳು ನಿರಾಶ್ರಿತರಾದ ಬಹುಸಂಖ್ಯಾತರಿಗೆ ಇನ್ನು ತಲುಪಲೇ ಇಲ್ಲ. ಮಾಡುತ್ತಿರುವ ಪರಿಹಾರ ಕಾರ್ಯಗಳಲ್ಲೂ ಜಾತಿ, ವರ್ಗ ತಾರತಮ್ಯಗಳು ಎದ್ದು ಕಾಣತೊಡಗಿವೆ. ಪರಿಹಾರದ ಹಣ ದೋಚಲು ಪುಡಾರಿಗಳು ಹಾಗೂ ಅಧಿಕಾರಿಗಳು ಕುತಂತ್ರ ಹೆಣೆಯುತ್ತಾ ಆಗಲೇ ಅರೆ ಜೀವವಾಗಿರುವ ನೆರೆ ಪೀಡಿತ ಜನರನ್ನು ಕುಕ್ಕಿ ತಿನ್ನಲಾರಂಭಿಸಿದ್ದಾರೆ. ಇದೀಗ ಯಾವ ಬರವಸೆಯೂ ಕಾಣದ ಜನರು ಆತ್ಮಹತ್ಯೆ ಮಾಡಿಕೊಳ್ಳಲು ತೊಡಗಿದ್ದಾರೆ.

ಇದು ರಾಜ್ಯದ ಶೇ.67ಕ್ಕೂ ಹೆಚ್ಚಿನ ಭೂಪ್ರದೇಶದ, ಸುಮಾರು 4300ಕ್ಕೂ ಹೆಚ್ಚಿನ ಹಳ್ಳಿಗಳು ಹಾಗೂ ಪೇಟೆಗಳ, ಸುಮಾರು22 ಲಕ್ಷ ಹೆಕ್ಟೇರ್‌ಗಳಿಗೂ ಹೆಚ್ಚಿನ ಭೂ ಪ್ರದೇಶದಲ್ಲಿ ಕಷ್ಟಪಟ್ಟು ಬೆಳೆಸಿದ, ಇಡೀ ವರ್ಷದ ಆದಾಯ ಮೂಲವಾದ ಬೆಳೆಗಳನ್ನೂ ಸಂಪೂರ್ಣವಾಗಿ ಕಳೆದು ಕೊಂಡ, ಸುಮಾರು 1.80ಕೋಟಿಗೂ ಹೆಚ್ಚಿನ ಜನರ ಮುಂದಿರುವ ತಕ್ಷಣದ ಸಾವು ಬದುಕಿನ ಪ್ರಶ್ನೆಗಳು ಹಾಗೂ ಆತಂಕಗಳಾಗಿವೆ. ಈ ಮೇಲಿನ ಅಂಕಿ ಸಂಖ್ಯೆಗಳು ಮಾಧ್ಯಮಗಳಲ್ಲಿ ಬಂದ ಒಂದು ಅಂದಾಜಿನ ವರದಿ ಮಾತ್ರ. ಇವುಗಳು ನಿಜ ಸ್ಥಿತಿಯನ್ನು ಪೂರ್ಣವಾಗಿ ಬಿಂಬಿಸುತ್ತಿದೆ ಎಂದು ಹೇಳಲು ಬರುವುದಿಲ್ಲ. ಯಾಕೆಂದರೆ ಆ ರೀತಿಯಲ್ಲಿ ಸಮೀಕ್ಷೆಗಳು ಇನ್ನು ನಡದೇ ಇಲ್ಲ. ರಾಜ್ಯ ಸರ್ಕಾರ ಅಧಿಕಾರಿಗಳ ಮೂಲಕ ನಡೆಸಿದ ಸಮೀಕ್ಷೆ ಆಂಶಿಕ ಮಾತ್ರ. ಅದೂ ಕೂಡ ಕೇಂದ್ರದಿಂದ ಹಣ ಪಡೆಯಲು ಮಾಡಿಕೊಂಡಿದ್ದು.

ಕರ್ನಾಟಕ ಸರ್ಕಾರ ನೆರೆ ಬಂದು ಉತ್ತರ ಕರ್ನಾಟಕ ಮುಳುಗುತ್ತಿದ್ದಾಗ ಸುತ್ತೂರು ಮಠದಲ್ಲಿ ನರಹಂತಕ ಮೋದಿಯಂತವರಿಂದ ಪಾಠ ಹೇಳಿಸಿಕೊಳ್ಳಲು ಬೈಠಕ್ಕಿಗೆ ಕುಳಿತಿತ್ತು. ಉತ್ತರ ಕರ್ನಾಟಕದ ನೆರೆ ದೊಡ್ಡ ಸುದ್ದಿಯಾದಾಗ, 2-3 ದಿನಗಳ ನಂತರ ಕೇವಲ 50ಕೋಟಿ ಪರಿಹಾರ ಘೋಷಿಸಿತು. ಅದಾದ ಕೂಡಲೇ ಮಂತ್ರಾಲಯ ಸ್ವಾಮಿಯನ್ನು ರಕ್ಷಿಸಲು ಖುದ್ದು ಗ್ರಾಮೀಣಾಭಿವೃದ್ಧಿ ಮಂತ್ರಿಯ ನೇತೃತ್ವದಲ್ಲಿ ಹೆಲಿಕಾಪ್ಟರ್ ಕಳಿಸಿತು. ಹೆಲಿಕಾಪ್ಟರ್ ಅನ್ನು ಮುಳುಗುತ್ತಿದ್ದ ಜನರನ್ನು ರಕ್ಷಿಸಲು ಬಳಸಿದ್ದು ಯಾರಿಗೂ ಕಾಣಿಸಿಲ್ಲ. ಮುಖ್ಯಮಂತ್ರಿ ವೈಮಾನಿಕ ಸಮೀಕ್ಷೆ ನಡೆಸಿದ ಮೇಲೆ ಮತ್ತೊಂದು 100 ಕೋಟಿ ಹಣ ಪರಿಹಾರ ಘೋಷಿಸಿದರು. ಆದರೆ ಆದ ನಷ್ಟ 20000 ಕೋಟಿಯಷ್ಟಿದೆ ಎಂದೂ ಕೂಡ ಹೇಳಿದರು. ಅದೇ ವೇಳೆಯಲ್ಲಿ ಕೇವಲ ಮಂತ್ರಾಲಯ ಮಠ ಒಂದಕ್ಕೇ 10ಕೋಟಿ ರೂಪಾಯಿ ಘೋಷಿಸಿದರು. ಅದಾದ ಮೇಲೆ ರಾಜ್ಯದ ಜನರಿಂದ ಉತ್ತರ ಕರ್ನಾಟಕ ನೆರೆ ಪರಿಹಾರ ನಿಧಿಗಾಗಿ ಮನವಿಗಳನ್ನು ಮುಖ್ಯ ಮಂತ್ರಿಯಿಂದ ಹಿಡಿದು ಎಲ್ಲಾ ಮಂತ್ರಿಗಳು ಪತ್ರಿಕೆಗಳಲ್ಲಿ ಮನವಿ ಮಾಡಲು ಶುರು ಹಚ್ಚಿದರು. ಈ ಜಾಹಿರಾತಿಗಾಗಿ ಎಷ್ಟು ಖರ್ಚು ಆಯಿತು ಎಂಬುದರ ವಿವರ ತಿಳಿದು ಬಂದಿಲ್ಲ. ಕೆಲವು ಕೋಟಿಗಳಿಗಿಂತಲೂ ಕಡಿಮೆ ಅಂತೂ ಇರೋದಿಲ್ಲ.

ಆದರೆ ಜನರು ಈ ನೆರೆಪೀಡಿತರಿಗಾಗಿ ಬಹಳ ಕಾಳಜಿಯಿಂದಲೇ ಸ್ಪಂದಿಸಿದರು. ಸುಮಾರು 1000 ಕೋಟಿಗಿಂತಲೂ ಹೆಚ್ಚು ಹಣವನ್ನು ಮುಖ್ಯಮಂತ್ರಿಗೆ ನೀಡಿದರು. ರಾಜ್ಯ ಸರ್ಕಾರವಾಗಲೀ ಕೇಂದ್ರ ಸರ್ಕಾರವಾಗಲೀ ಆಗಿನ್ನೂ 200 ಕೋಟಿಯಷ್ಟೂ ಪರಿಹಾರ ಘೋಷಣೆ ಮಾಡಿರಲಿಲ್ಲ. ಆದರೆ ಜನರು ಮುಖ್ಯಮಂತ್ರಿಗೆ 1000ಕೋಟಿಯಷ್ಟು

ನೀಡಿದರೆ, ಇನ್ನು ಬೇರೆ ಬೇರೆ ಕಡೆಗಳಿಂದ ನೀಡಿದ್ದರ ಬಗ್ಗೆ ಲೆಕ್ಕ ಇಲ್ಲದಿದ್ದರೂ ಒಂದು ಅಂದಾಜು ಅದು ಕೂಡ ಹಲವು ನೂರು ಕೋಟಿಗಳಷ್ಟಿದೆ. ನಂತರ ಕೇಂದ್ರ ಸರ್ಕಾರ 1000ಕೋಟಿಯ ವಾಗ್ಧಾನ ನೀಡಿತು.

ಇದೇ ವೇಳೆಯಲಿ ಅಕ್ರಮ ಗಳಿಕೆಯ ಕಪ್ಪು ಹಣವನ್ನು ಬಿಳಿ ಮಾಡುವವರು, ಇದುವರೆಗೂ ಜನರ ಹಣವನ್ನು ದೋಚಿದ್ದರಲ್ಲಿ ಕೆಲವು ಪೈಸೆಗಳಷ್ಟು ಕೊಟ್ಟುಬಿಟ್ಟು ತಾವೇನೋ ಮಹಾನ್ ಕಾಳಜಿಯಿಂದ ಉದಾರವಾಗಿ ದಾನ ಮಾಡಿದ್ದೇವೆಂದು ಪೋಜು ಕೊಡುವವರು ಸಾಕಷ್ಟು ಜನರಿದ್ದಾರೆ. ಇದರಲ್ಲಿ ವ್ಯಾಪಕ ಪರಿಸರ ಹಾನಿ ಮಾಡುತ್ತಾ, ರೈತರ ಕೃಷಿಜಮೀನುಗಳನ್ನು ಕಬಳಿಸುತ್ತಾ, ಜನರ ಆಸ್ತಿಯಾದ ಖನಿಜ ಸಂಪತ್ತನ್ನು ಕೊಳ್ಳೆ ಹೊಡೆಯುತ್ತಿರುವ ಗಣಿಮಾಲಿಕರುಗಳು, ಮಠ ಪೀಠಗಳು, ಇತರ ಕಂಪನಿಗಳು ಇವೆ. ಐ. ಟಿ, ಹಾಗೂ ಬಿ.ಟಿ ಕಂಪನಿಗಳು ಸರ್ಕಾರಗಳೊಂದಿಗೆ ಅಕ್ರಮ ವ್ಯವಹಾರ ಇಟ್ಟುಕೊಂಡು ಈ ನಾಡಿನ ಭೂಮಿ, ನೀರು, ವಿದ್ಯುತ್, ಶ್ರಮಜೀವಿಗಳನ್ನು ಬಿಟ್ಟಿಯೆನ್ನುವಷ್ಟು ಬಳಸಿದ್ದಲ್ಲದೆ, ಲಕ್ಷಾಂತರ ಕೋಟಿ ಹಣಕಾಸಿನ ಶ್ರೀಮಂತಿಕೆಯನ್ನು ಜನರಿಂದ ಕಸಿದುಕೊಂಡಿದ್ದರೂ, ಕಂಗಾಲಾಗಿರುವ ನೆರೆ ಪೀಡಿತರಿಗೆ ಹಣಕಾಸು ಮಾಡುವ ವಿಚಾರದಲ್ಲಿ ಹಿಂದೆ ಮುಂದೆ ನೋಡತೊಡಗಿದ್ದವು. ಕೊನೆಗೆ ಇನ್ಫೋಸಿಸ್ ಹಾಗೂ ಬಯೋಕಾನ್ ಸೇರಿ 60 ಕೋಟಿ ನೀಡುತ್ತೇವೆಂದು ಹೇಳಿಕೊಂಡರು. ವಿಪ್ರೋ ಕೂಡ ನಂತರ ಕೊಡುವ ವಾಗ್ದಾನ ಮಾಡಿತು.

ಉತ್ತರ ಕರ್ನಾಟಕದಲ್ಲಿ ಬಂದ ನೆರೆ ಹಿಂದೆಂದಿಗಿಂತಲೂ ಭೀಕರವಾದುದು. ಅದರಿಂದ ಆದ ಪ್ರಾಣಹಾನಿ ಆಸ್ತಿಪಾಸ್ತಿ ಹಾನಿಯ ಬಗ್ಗೆ ಇನ್ನು ಕೂಡ ಸರಿಯಾದ ಅಂದಾಜಿಗೆ ಬರಲು ಸಾಧ್ಯವಾಗುತ್ತಿಲ್ಲ. ಸರ್ಕಾರಿ ಅಂಕಿಸಂಕಿಗಳು ವಾಸ್ತವ ಪರಿಸ್ಥಿತಿಯನ್ನು ಹೇಳುತ್ತಿಲ್ಲ. ರಾಜ್ಯ ಸರ್ಕಾರ 20,000ಕೋಟಿಗಿಂತಲೂ ಹೆಚ್ಚಿನ ಹಾನಿ ಉಂಟಾಗಿದೆ ಎಂದು ಹೇಳುತ್ತಿದೆ. ಆದರೆ ಅದು ಸರಿಯಾಗಿ ಅಂದಾಜಿಸಿ ಹೇಳಿದಂತೆ ತೋರುತ್ತಿಲ್ಲ.

ಒಂದು ಮುಖ್ಯ ವಿಚಾರ ಏನೆಂದರೆ ಜನರು ನೀಡಿದ ಹಣ ಹೆಚ್ಚುಕಮ್ಮಿ ಕೇಂದ್ರ ಹಾಗೂ ರಾಜ್ಯಸರ್ಕಾರಗಳು ನೀಡಿದ ಹಣದಷ್ಟೇ ಆಗಿರುವುದು. ( ಘೋಷಣೆ ಆಗಿದ್ದು) ಹಾಗಾದಾಗ ಜನರಿಗೆ ಸೇರಿರುವ ಶ್ರಮ, ಭೂಮಿ, ನೀರು, ಖನಿಜ ಇತ್ಯಾದಿ ಸಂಪತ್ತುಗಳನ್ನು ವಿದೇಶಿ ಕಂಪನಿಗಳಿಗೆ, ದೊಡ್ಡ ಕಾರ್ಪೋರೇಟ್‌ಗಳಿಗೆ, ಗಣಿಮಾಲಿಕರುಗಳಿಗೆ, ಅಕ್ರಮಿಗಳಿಗೆ ಒಪ್ಪದಿಂದ ಒಪ್ಪಿಸುವುದು, ಜನರಿಂದ ತೆರಿಗೆ ಸಂಗ್ರಹಿಸಿ ದೊಡ್ಡ ಕಾರ್ಪೋರೆಟ್ ಕಂಪನಿಗಳಿಗೆ ಸುರಿಯುವುದು, ಜನರಿಗೆ ಸಂಕಷ್ಟ ಬಂದಾಗ ಜನರಿಂದಲೇ ಪರಿಹಾರ ಸಂಗ್ರಹಿಸಿ ಸಂತ್ರಸ್ಥರಿಗೆ ಹಂಚುವುದು (ಅದರಲ್ಲೂ ಕೂಡ ಮೋಸ, ವಂಚನೆ ಬೇರೆ). ನಾಡಿನ ನೆಲ, ಜಲ, ಪರಿಸರ ನಾಶಮಾಡಲು ಅನುವು ಮಾಡಿಕೊಡುವುದು, ( ಈಗ ಆಗಿರುವ ನೆರೆಗೂ ಕೂಡ ಪರಿಸರದ ಎಗ್ಗಿಲ್ಲದ ನಾಶ, ಭೂಮಿಯ ತಾಪಮಾನ ಏರಿಕೆಗಳು ಕಾರಣವಾಗಿವೆ.) ಪ್ರಶ್ನೆ ಮಾಡಿದವರನ್ನು ಪೋಲೀಸ್ ಬಲ ಬಳಸಿ ಹತ್ತಿಕ್ಕುವುದು, ಇವಿಷ್ಟೇ ಸರ್ಕಾರಗಳ ಪ್ರಜಾಸತ್ತಾತ್ಮಕ ಕರ್ತವ್ಯ ಎಂದಾಗುತ್ತದೆಯೆ?

ಈಗ ನೋಡಿಕೊಳ್ಳಬೇಕಾದ ಪ್ರಶ್ನೆಯೆಂದರೆ ಜನರಿಂದ ಆಯ್ಕೆಯಾದ ಒಂದು ಸರ್ಕಾರ ಜನರಿಗೆ ಯಾವುದೇ ತುರ್ತು ಸಮಸ್ಯೆಗಳು ಬಂದಾಗ ತಕ್ಷಣ ಅವರ ಹಿತಕ್ಕಾಗಿ ಎಲ್ಲವನ್ನೂ ಮಾಡಬೇಕು. ಆದರೆ ಇಲ್ಲಿ ಆಗುತ್ತಿರುವುದು ಅದಕ್ಕೆ ವಿರುದ್ಧವಾಗಿದೆ. ಲಕ್ಷಾಂತರ ಜನರು ಎಲ್ಲವನ್ನೂ ಕಳೆದುಕೊಂಡು ಪ್ರಾಣಭೀತಿಯಿಂದ ಒದ್ದಾಡುತ್ತಿದ್ದರೂ ಸರ್ಕಾರಗಳು ಜುಜುಬಿಯೆನ್ನುವಷ್ಟು ಹಣ ಬಿಡುಗಡೆ ಮಾಡಿತು. ಆದರೆ ಹಗಲೇ ದರೋಡೆ ಮಾಡಿದ ಸತ್ಯಂನಂತಹ ಹಲಾಲುಕೋರ ಕಂಪನಿಗಳನ್ನು ರಕ್ಷಿಸಲು ಹಲವು ಸಾವಿರ ಕೋಟಿಗಳಷ್ಟು ಜನರ ಹಣ ಬಿಡುಗಡೆ ಮಾಡಲು, ದೊಡ್ಡ ಕಂಪನಿಗಳ ಸಾವಿರಾರು ಕೋಟಿಯಷ್ಟು ತೆರಿಗೆ ಮನ್ನಾ ಮಾಡಲು, ಪ್ರತಿನಿತ್ಯ ನೂರಾರು ಕೋಟಿ ರೂಪಾಯಿ ಹಣವನ್ನು ವಿದೇಶಿ ಹಾಗೂ ಇತರ ಕಾರ್ಪೋರೇಟ್‌ಗಳಿಗೆ ರಿಯಾಯಿತಿ ನೀಡಲು ಇದೇ ಸರ್ಕಾರಗಳಿಗೆ ಬಹಳ ಸುಲಭದಲ್ಲಿ ಸಾದ್ಯವಾಗುತ್ತದೆ. ಆದರೆ ಜನರ ಜೀವನ್ಮರಣದ ಸಂಕಟದಲ್ಲಿ ಸಿಕ್ಕಿ ಒದ್ದಾಡುತ್ತಿರುವಾಗ ಅವರಿಗೆ ಕನಿಷ್ಟ ಜೀವನದ ಭದ್ರತೆಗಾಗಿಯಾದರೂ ಹಣ ನೀಡಲು ಸರ್ಕಾರಗಳು ಮುಂದಾಗುವುದಿಲ್ಲವೆಂದರೆ ಏನು ಅರ್ಥ? ಈ ಪ್ರಶ್ನೆಯನ್ನು ಗಂಭೀರವಾಗಿ ನೋಡಬೇಕಾದ ಅಗತ್ಯ ಇದೆ.

ಇನ್ನು ಈಗ ಒಟ್ಟುಗೂಡಿದ ಸಾವಿರಾರು ಕೋಟಿ ರೂಪಾಯಿಗಳ ಹಣ ನೆರೆ ಸಂತ್ರಸ್ಥರಿಗೆ ತಲುಪುವ ಬಗ್ಗೆ ಖಾತರಿ ಇಲ್ಲ. ಯಾಕೆಂದರೆ ಈ ಹಿಂದಿನ ಇಂತಹ ವಿಪತ್ತುಗಳ ಸಂದರ್ಭದಲ್ಲಿ ಒಟ್ಟುಗೂಡಿದ ಮತ್ತು ಘೋಷಣೆ ಮಾಡಿದ ಹಣ

ಇದುವರೆಗೂ ಸಂತ್ರಸ್ಥರಿಗೆ ಸರಿಯಾಗಿ ತಲುಪದೇ ಇರುವ ಉದಾಹರಣೆಗಳೇ ಆಗಿವೆ. ಯೂನಿಯನ್ ಕಾರ್ಬೈಡ್ ವಿಷಾನಿಲ ದುರಂತದಲ್ಲಿ ಹಾನಿಗೊಳಗಾದವರಿಗೆ ಪರಿಹಾರ ಸಿಕ್ಕಿಲ್ಲವೆಂದು ಘಟನೆ ನಡೆದು ಹತ್ತಾರು ವರ್ಷಗಳು ಕಳೆದಿದ್ದರೂ ಅಲ್ಲಿನ ಜನರು ಇಂದಿಗೂ ಹೋರಾಡುತ್ತಿದ್ದಾರೆ. ಅದೇ ರೀತಿ ಗುಜರಾತ್ ಹಾಗೂ ಮಹಾರಾಷ್ಟ್ರ ಭೂಕಂಪ ಸಂಭವಿಸಿ ಹದಿನೈದು ವರ್ಷಗಳೇ ಕಳೆಯುತ್ತಿದ್ದರೂ ಇಂದಿಗೂ ಸರಿಯಾಗಿ ಪರ್ಯಾಯ ಮಾಡಿಲ್ಲವೆಂದು ಜನರು ಹೋರಾಡುತ್ತಿದ್ದಾರೆ. ವಾಸ್ತವವೆಂದರೆ ಈ ಎರಡೂ ಸಂದರ್ಭಗಳಲ್ಲಿ ದೇಶ ವಿದೇಶಗಳಿಂದ ಸಾವಿರಾರು ಕೋಟಿ ರೂಪಾಯಿಗಳು ಹರಿದು ಬಂದಿತ್ತು. ಅವುಗಳ ಹಂಚಿಕೆಗಳ ಬಗ್ಗೆ ಯಾವುದೇ ಸರಿಯಾದ ವರದಿಗಳಿಲ್ಲ. ಆ ಬಗ್ಗೆ ಸರ್ಕಾರಗಳು ಜನರಿಗೆ ಉತ್ತರದಾಯಿಯಾಗಿ ವರ್ತಿಸಿಲ್ಲ. ಆ ಹಣಕಾಸಿನಲ್ಲಿ ಬಹುತೇಕ ಹಣ ರಾಜಕೀಯ ಪುಡಾರಿಗಳು, ಅಧಿಕಾರಿಗಳು ನುಂಗಿ ನೀರು ಕುಡಿದು ಈಗ ಜೀರ್ಣಿಸಿಕೊಂಡೂ ಬಿಟ್ಟಿದ್ದಾರೆ. ಸಂತ್ರಸ್ಥ ಜನರಲ್ಲಿ ಬಹುಸಂಖ್ಯಾತರು ಮಾತ್ರ ಇನ್ನೂ ಅನಾಥರಾಗಿಯೇ ಇದ್ದಾರೆ . ಇದಿಷ್ಟೇ ಅಲ್ಲದೆ ಮಾಡಿರುವ ಅಲ್ಪ ಪರಿಹಾರ ಕಾರ್ಯಗಳಲ್ಲೂ ಎದ್ದುಕಾಣುವ ಜಾತಿ ಮತ್ತು ವರ್ಗ ತಾರತಮ್ಯತೆಗಳು ಬೇರೆ. ಮಾಡಿರುವ ಪರಿಹಾರ ಕಾರ್ಯಗಳಲ್ಲೂ ದಲಿತರಿಗೇ ವಂಚನೆಗಳು ಹೆಚ್ಚಾಗಿವೆ.

ಇವೆಲ್ಲಾ ನಮ್ಮ ಕಣ್ಣ ಮುಂದೆ ಇರುವಾಗ ಈಗ ಕರ್ನಾಟಕದ ನೆರೆ ಸಂತ್ರಸ್ಥರಿಗೆ ಪರಿಹಾರ ಕಾರ್ಯಗಳು ಸರಿಯಾಗಿ ತಲುಪುವಂತೆ ನಿಗಾ ಇಡಲು ಸಂತ್ರಸ್ಥ ಜನರು ಸೇರಿದಂತೆ ಎಲ್ಲರೂ ಸಂಘಟಿತರಾಗಿ ನಿಲ್ಲಬೇಕಾದ ಅಗತ್ಯ ತುಂಬಾನೆ ಇದೆ. ಇಲ್ಲದಿದ್ದಲ್ಲಿ ಈಗ ಒಟ್ಟುಗೂಡಿರುವ ಹಣ ಹಗಲು ದರೋಡೆಕೋರರ ಜೇಬಿಗೆ ಇಳಿದು ಸಂತ್ರಸ್ಥ ಜನರು ಅತಂತ್ರರಾಗಿಯೇ ಉಳಿಯಬೇಕಾಗುತ್ತದೆ. ಜನರ ಪರವಾಗಿರುವ ಸಂಘಟನೆಗಳು, ವ್ಯಕ್ತಿಗಳು, ಮಾಧ್ಯಮಗಳು ನೇರವಾಗಿ ಜನರಿಗೆ ಪರಿಹಾರ ತಲುಪುವಂತೆ ನಿಗಾ ಇಟ್ಟು ನೋಡಿಕೊಳ್ಳುವುದು ಅಗತ್ಯವಾಗಿದೆ.

20-10-2009 **--ಭರತ್ ರಾಜ್**

Kumar.bharath047@gmail.com